ವಿಷಯವಾಗಿರಲಿಲ್ಲ. ನಾನು ಕಾರ್ಯೋನ್ಮುಖನಾಗಲು ಹೆಜ್ಜೆಗಳನ್ನು ಹಾಕಿದ್ದೆ ಅಷ್ಟೇ. ಅಕಸ್ಮಾತ್ತಾಗಿ ನನ್ನ ದೃಷ್ಟಿ ಎದುರಿಗಿದ್ದ ಡ್ರೆಸ್ಸಿಂಗ್ ಟೇಬಲಿನ ಮೇಲಿರುವ ಕನ್ನಡಿಯಲ್ಲಿ ಕಂಡ ನನ್ನ ಮುಖದತ್ತ ಹರಿಯಿತು. ಅದು ನನ್ನ ಮುಖದಂತೆ ಕಾಣಿಸಲಿಲ್ಲ. ಅದು ಸಂಪೂರ್ಣವಾಗಿ ಬಿಳುಚಿಕೊಂಡಿತ್ತು.

ಆ ಕೊಠಡಿಯಲ್ಲಿ ಮತ್ತೊಂದು ಕನ್ನಡಿಯೂ ಇತ್ತು. ಎರಡರಲ್ಲೂ ಎರಡೆರಡು ದೀಪದ ಹಿಡಿಕೆಗಳಿದ್ದು ಅದರೊಳಗೆ ಹೊಚ್ಚ ಹೊಸ ಮೇಣದ ಬತ್ತಿಗಳಿದ್ದವು. ಬೀರುವಿನ ಮೇಲೂ ಮೇಣದ ಬತ್ತಿಗಳಿದ್ದವು. ನಾನು ಅಲ್ಲಿದ್ದ ಎಲ್ಲಾ ಮೇಣದ ಬತ್ತಿಗಳನ್ನು ಒಂದೊಂದಾಗಿ ಉರಿಸಿದೆ. ಬೆಂಕಿಗೂಡಿನಲ್ಲಿ ಸೌದೆಗಳನ್ನು ಒಟ್ಟಿದ್ದು ಉರಿಸುವುದಷ್ಟೇ ಬಾಕಿ ಇತ್ತು. ವಾತಾವರಣ ಹೇಗೂ ತಣ್ಣಗಿದ್ದುದರಿಂದ ಬೆಂಕಿಯನ್ನೂ ಉರಿಸಿದೆ. ಸ್ವಲ್ಪ ಹೊತ್ತು ಮೈ ಕಾಯಿಸಿ ಬೆಂಕಿಗೆ ಬೆನ್ನು ತಿರುಗಿಸಿ ಮತ್ತೊಮ್ಮೆ ಕೋಣೆಯನ್ನು ಅವಲೋಕಿಸಿದೆ. ನಾನು ಎದುರಿಗಿದ್ದ ಒಂದು ಕುರ್ಚಿ ಮತ್ತು ಮೇಜನ್ನು ನನ್ನ ಮುಂದಕ್ಕೆ ಎಳೆದು ಅದರ ಮೇಲೆ ನನ್ನ ರಿವಾಲ್ವರನ್ನು ಹೊರತೆಗೆದು ಇರಿಸಿದೆ. ಎಲ್ಲವೂ ಸರಿಯಾಗಿದೆ ಎಂದು ಅನಿಸಿದರೂ ಬೆಳಕು ತಲುಪದ ದೂರದ ಕತ್ತಲ ಮೂಲೆಗಳು, ರಾತ್ರಿಯ ನೀರವ ಮೌನ ಮನಸ್ಸಿನೊಳಗೆ ಏನೆಲ್ಲಾ ವಿಚಿತ್ರ ಭ್ರಾಂತಿಗಳನ್ನು ಮೂಡಿಸತೊಡಗಿದವು. ಬೆಂಕಿಗೂಡಿನೊಳಗಡೆ ಆಗಾಗ ಚಟಪಟ ಸದ್ದು ಮಾಡುತ್ತಿದ್ದ ಸೌದೆಗಳು ಬೆಚ್ಚಿ ಬೀಳಿಸುತ್ತಿದ್ದವು. ಕತ್ತಲನ್ನಾವರಿಸಿದ್ದ ದೂರದ ಮೂಲೆಗಳ ಮರೆಯಲ್ಲಿ ಅಡಗಿಕೊಂಡಿರುವ ಜೀವಿಗಳು ಒಂದೊಂದಾಗಿ ಎದ್ದು ಹೊರ ಬರುವ ಸಮಯವೆಂದು ಅನಿಸತೊಡಗಿತು. ಅನಾವಶ್ಯಕವಾಗಿ ಸಂಕಟಪಡುವುದಕ್ಕಿಂತಲೂ ಎದ್ದು ಒಮ್ಮೆ ಪರೀಕ್ಷಿಸಿ ಬರುವುದೇ ಒಳ್ಳೆಯದೆಂದು ಕೈಯಲ್ಲಿ ಮೇಣದ ಬತ್ತಿಯನ್ನು ಹಿಡಿದುಕೊಂಡು ಎಲ್ಲಾ ಮೂಲೆಗಳನ್ನು ಕೂಲಂಕಷವಾಗಿ ಪರೀಕ್ಷಿಸಿ ನೋಡಿದೆ. ಏನೂ ಕಾಣಿಸಲಿಲ್ಲ. ನನ್ನ ಎದುರಿಗಿದ್ದ ಕತ್ತಲ ಮೂಲೆಯ ನೆಲದ ಮೇಲೆ ಉರಿಯುತ್ತಿದ್ದ ಬತ್ತಿಯನ್ನಿಟ್ಟು ಹಿಂದಿರುಗಿದೆ.

ಆತಂಕಕ್ಕೊಳಗಾಗಲು ಯಾವುದೇ ಕಾರಣಗಳಿಲ್ಲದಿದ್ದರೂ ನಾನು ಸಾಕಷ್ಟು ಉದ್ವಿಗ್ನನಾಗಿದ್ದೆ. ಆದರೂ ನನ್ನ ಮನಸ್ಸಿನಲ್ಲಿ ಯಾವುದೇ ಗೊಂದಲಗಳಿರಲಿಲ್ಲ. ಅತೀಂದ್ರಿಯ ಶಕ್ತಿಗಳ ಮೇಲೆ ನನಗೆ ಕಿಂಚಿತ್ತೂ ನಂಬಿಕೆ ಇರಲಿಲ್ಲ. ಕಾಲ ಕಳೆಯಲು ನನಗೆ ಗೊತ್ತಿದ್ದ ಶಿಶುಗೀತೆಗಳನ್ನು ಹಾಡತೊಡಗಿ ಕೊನೆಗೆ ಬೇಸರಗೊಂಡು ನಿಲ್ಲಿಸಿದೆ. ನನ್ನ ಮನಸ್ಸು ಕೆಳಗಿದ್ದ ಮೂವರು ವಿಚಿತ್ರ ಮುದುಕರ ಕಡೆಗೆ ಹರಿಯಿತು.

ಗೋಡೆಗಳ ಮೇಲೆ, ಬೀರುವಿನ ಮೇಲೆ ಸುಮಾರು ಏಳು ಮೇಣದ ಬತ್ತಿಗಳು ಉರಿಯುತ್ತಿದ್ದರೂ ಕೆಂಪು ಕೋಣೆಯೊಳಗಿನ ಮಬ್ಬು ಕತ್ತಲೆ ಹಾಗೆಯೇ ಇತ್ತು. ಕೋಣೆಯ ಮಬ್ಬುಗೆಂಪು ಮತ್ತು ಬೂದು ಬಣ್ಣ ವಾತಾವರಣವನ್ನಷ್ಟೇ ಅಲ್ಲದೆ ಮಾನಸಿಕವಾಗಿಯೂ ಒಂದು ನಮೂನೆಯ ವಿಷಣ್ಣಭಾವ ಮೂಡಿಸಿತ್ತು. ಹೊಯ್ದಾಡುತ್ತಿದ್ದ ಮೇಣದ ಬತ್ತಿಯ ಜ್ವಾಲೆಗಳ ನೆರಳು ಗೋಡೆಗಳ ಮೇಲೆ ಭೂತದಂತೆ ಕುಣಿಯುತ್ತಿತ್ತು. ಹೊರಗಿನ ಪಡಸಾಲೆಯಲ್ಲೂ ಮೇಣದ ಬತ್ತಿಗಳಿರುವುದನ್ನು ನಾನು ಗಮನಿಸಿದ್ದೆ. ಉರಿಯುತ್ತಿದ್ದ ಒಂದು ಬತ್ತಿಯನ್ನು ಕೈಯಲ್ಲಿ ಹಿಡಿದು ನಾನು ಬಾಗಿಲನ್ನು ತೆರೆದು ಹೊರಗೆ ಕಾಲಿಟ್ಟೆ. ಪಡಸಾಲೆಯಲ್ಲಿ ಬೆಳದಿಂಗಳು ಹರಡಿತ್ತು. ಸುಮಾರು ಹತ್ತು ಮೇಣದ ಬತ್ತಿಗಳನ್ನು ಹೆಕ್ಕಿಕೊಂಡು ಒಳಗೆ ಬಂದೆ. ಕೋಣೆಯೊಳಗೆ ಪಿಂಗಾಣಿ ವಸ್ತುಗಳು ಸಾಕಷ್ಟಿದ್ದವು. ಕಪ್ಪು, ಸಾಸರುಗಳಲ್ಲಿ ಒಂದೊಂದು ಮೇಣದ ಬತ್ತಿಯನ್ನು ಉರಿಸಿ ಎಲ್ಲಾ ಕತ್ತಲ ಮೂಲೆ ಮೂಲೆಗಳಲ್ಲಿರಿಸಿ ಬಂದೆ. ಈಗ ಹದಿನೇಳು ಮೇಣದ ಬತ್ತಿಗಳು ಉರಿಯತೊಡಗಿ ಕೆಂಪು ಕೋಣೆ ಪ್ರಕಾಶಮಾನವಾಗುತ್ತಿದ್ದಂತೆಯೇ ನನ್ನ ಮನಸ್ಸೂ ಗೆಲುವಾಗತೊಡಗಿತು. ನಾನು ಕೊಂಚ ನೆಮ್ಮದಿಯಿಂದ ಕುರ್ಚಿಯ ಮೇಲೆ ಕುಳಿತುಕೊಂಡು ಉರಿದು ಕ್ಷೀಣವಾಗುತ್ತಿದ್ದ ಬತ್ತಿಗಳನ್ನೇ ಗಮನಿಸತೊಡಗಿದೆ. ಬತ್ತಿಗಳೊಂದಿಗೆ ಸಮಯವೂ ಜಾರತೊಡಗಿತು.